8

ಇಲಾಖೆ / ವಿಷಯ : DEPARTMENT / SUBJECT: ಸಂಸತ್ - ಕಲಾಪ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 22/8/2020

# ಪರ್ಯಾಯ ದಿನಗಳಂದು ಸಂಸತ್ ಕಲಾಪಕ್ಕೆ ನಿರ್ಧಾರ?



**ಹೊಸದಿಲ್ಲಿ:** ಸಂಸತ್ತಿನ ಮುಂಗಾರು ಅಧಿವೇಶನ ಸೆಪ್ಟೆಂಬರ್ ಎರಡನೇ ವಾರದಲ್ಲಿ ಪ್ರಾರಂಭಗೊಳ್ಳುವ ನಿರೀಕ್ಷೆ ಇದ್ದು, ಲೋಕಸಭೆ ಹಾಗೂ ರಾಜ್ಯಸಭೆಗಳ ಕಲಾಪವನ್ನು ಪರ್ಯಾಯ ದಿನಗಳಂದು ನಡೆಸುವ ಪ್ರಸ್ತಾವವನ್ನು ಸಂಸತ್ ಸಚಿವಾಲಯ ಸರಕಾರದ ಮುಂದಿಟ್ಟಿದೆ.

ಸಂಸತ್ ಸಚಿವಾಲಯದ ಅಧಿಕಾರಿಗಳು ವರ್ಚುಯಲ್, ಸೆಮಿ ವರ್ಚುಯಲ್ ಸೇರಿ ಹಲವು ರೀತಿಯಲ್ಲಿ ಅಧಿವೇಶನ ನಡೆಸುವ ಮಾದರಿಗಳನ್ನು ನೀಡಿದ್ದರು. ಆದರೆ ಈಗ ದಿನ ಬಿಟ್ಟು ದಿನ ಕಲಾಪಗಳನ್ನು (ಒಂದು ದಿನ ಲೋಕಸಭೆ, ಇನ್ನೊಂದು ದಿನ ರಾಜ್ಯಸಭೆ) ನಡೆಸಲು ಬಹುತೇಕ ಅಂತಿಮ ನಿರ್ಧಾರಕ್ಕೆ ಬರಲಾಗಿದೆ ಎನ್ನಲಾಗಿದೆ. ಲೋಕಸಭೆ ಕಲಾಪವನ್ನು ಲೋಕಸಭೆ, ರಾಜ್ಯಸಭೆ ಹಾಲ್‌ಗಳಲ್ಲಿ ಮತ್ತು ಸೆಂಟ್ರಲ್ ಹಾಲ್‌ಗಳಲ್ಲಿ; ರಾಜ್ಯಸಭೆ ಕಲಾಪವನ್ನು ರಾಜ್ಯಸಭೆ ಮತ್ತು ಲೋಕಸಭೆ ಹಾಲ್‌ಗಳಲ್ಲಿ ನಡೆಸುವ ಕುರಿತು ಯೋಚನೆ ಮಾಡಲಾಗುತ್ತಿದೆ. ಅಂತಿಮ ನಿರ್ಧಾರದ ಬಳಿಕ ಆಸನ ವ್ಯವಸ್ಥೆ ಕೈಗೊಳ್ಳಲಾಗುವುದು. ಅದಕ್ಕೆ ಪೂರಕವಾಗಿ ಎಲ್‌ಇಡಿ ಪರದೆಗಳ ಅಳವಡಿಕೆ, ಸೂಕ್ತ ಧ್ವನಿವರ್ಧಕ ವ್ಯವಸ್ಥೆ ಕೈಗೊಳ್ಳಲಾಗುವುದು ಎಂದು ಮೂಲಗಳು ತಿಳಿಸಿವೆ.

ಕೊನೆಯದಾಗಿ ಸಂಸತ್ ಅಧಿವೇಶನ ನಡೆದಿದ್ದು ಮಾರ್ಚ್ 23ರಂದು. ನಿಯಮಾವಳಿಗಳ ಪ್ರಕಾರ 6 ತಿಂಗಳೊಳಗೆ ಮತ್ತೆ ಅಧಿವೇಶನ ನಡೆಸಲೇಬೇಕು. ಆದ್ದರಿಂದ ಕೊರೊನಾ ಆತಂಕದ ನಡುವೆಯೂ ಸೆ. 22 ರೊಳಗೆ ಅಧಿವೇಶನ ಆರಂಭವಾಗಲೇಬೇಕಿದೆ. ಕೋವಿಡ್ ಹಿನ್ನೆಲೆಯಲ್ಲಿ ಸಾಮಾಜಿಕ ಅಂತರ ಪಾಲನೆ ಸೇರಿ ಸುರಕ್ಷಾ ಕ್ರಮಗಳೊಂದಿಗೆ ಅಧಿವೇಶನ ನಡೆಸುವುದು ಸರಕಾರಕ್ಕೆ ಸವಾಲಾಗಿದೆ.